ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 66-70
©*IIMRD*, Mysuru

IIMRD JOURNALS
www.iimrd.com

# ತುಮಕೂರು ಜಿಲ್ಲೆಯ ರಾಜಕೀಯ ಪಟು ಡಿ.ಎಸ್.ಮಲ್ಲಪ್ಪ

**ಡಾ.ಎಸ್.ನಾಗರತ್ನಮ್ಮ[1] ಮತ್ತು ನಾರಾಯಣ ಗೌಡ[2]**

[1]ಹಿರಿಯ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು

[2]ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜಿ.ಎಫ್.ಜಿ.ಸಿ. ಸಿದ್ದಾಪುರ (ಉ.ಕ)

**ಸಾರಾಂಶ: (Abstract)**

*ನಮ್ಮ ರಾಷ್ಟ್ರವನ್ನು ದಾಸ್ಯ ಸಂಕೋಲೆಯಿಂದ ವಿಮುಕ್ತಿಗೊಳಿಸಲು ರಾಷ್ಟ್ರಪಿತರಾದ ಗಾಂಧೀಜಿಯವರು ರೂಪಿಸಿದ ಚಳುವಳಿಗಳಲ್ಲಿ ಮೈಸೂರು ಸಂಸ್ಥಾನದ ತುಮಕೂರು ಜಿಲ್ಲೆಯ ಪಾತ್ರ ಅವಿಸ್ಮರಣೀಯ. ಅಂದು ಮೈಸೂರು ಸಂಸ್ಥಾನದಲ್ಲಿ ನಡೆದ ಚಳುವಳಿಗಳು ಕೇವಲ ದೇಶ ಸ್ವಾತಂತ್ರ್ಯವಷ್ಟೇ ಅಲ್ಲದೇ ಸಂಸ್ಥಾನದ ರಾಜ್ಯಶಾಹೀ ಪ್ರಭುತ್ವದಿಂದ ಸ್ವತಂತ್ರಗೊಳ್ಳುವುದು ಆಗಿತ್ತು. ತುಮಕೂರು ಜಿಲೆಯಲ್ಲಿ ಸುಮಾರು 600 ಸ್ವತಂತ್ರ ಹೋರಾಟಗಾರರು ಅಂದು ಹೋರಾಡಿ ತಮ್ಮ ಬಲಿದಾನಗಳನ್ನು ತ್ಯಾಗ ಮಾಡಿದ್ದಾರೆ. ಗಾಂಧಿ ತತ್ವಗಳನ್ನು ಪಾಲಿಸುತ್ತಾ ಲಾಠಿ ಚಾರ್ಜ್, ಸೆರೆಮನೆ ವಾಸ ಇನ್ನಿತರೆ ಚಿತ್ರಹಿಂಸೆಗಳನ್ನು ಅನುಭವಿಸಿದ ಈ ಮಹನೀಯರ ಪರಿಚಯ ಸಂದರ್ಭಕ್ಕೆ ಔಚಿತ್ಯಪೂರ್ಣವಾಗಿದೆ. ಈ ಹಿನ್ನೆಲೆಯಲ್ಲಿ ಈ ಲೇಖನದಲ್ಲಿ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಡಿ.ಎಸ್.ಮಲ್ಲಪ್ಪನವರನ್ನು ಪರಿಚಯ ಮಾಡುವ ಪ್ರಯತ್ನವಾಗಿದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ತುಮಕೂರು ಜಿಲ್ಲೆ, ಡಿ.ಎಸ್.ಮಲ್ಲಪ್ಪ, ಪ್ರಜಾಪಕ್ಷ, ಪ್ರಜಾಪ್ರತಿನಿಧಿ ಸಭೆ*

## ಪೀಠಿಕೆ

ಡಿ.ಎಸ್.ಮಲ್ಲಪ್ಪನವರು ಮೈಸೂರು ಸಂಸ್ಥಾನದ ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಒಬ್ಬ ಧೀಮಂತ ರಾಜಕೀಯ ಪಟು ಮತ್ತು ಸ್ವಾತಂತ್ರ್ಯ ಹೋರಾಟಗಾರರು. ಇವರು ಪ್ರಜಾಪ್ರತಿನಿಧಿ ಸಭೆ ಅಥವಾ ನ್ಯಾಯವಿದಾಯಕ ಸಭೆಯ ಸದಸ್ಯರಾಗಿದ್ದು ಮೈಸೂರು ಸಂಸ್ಥಾನದ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಇವರು ಸಂಸ್ಥಾನದಲ್ಲಿ ಪ್ರಜಾಪಕ್ಷವನ್ನು ಕಟ್ಟಿ, ಅದರ ನಾಯಕರಾಗಿ ಗುರುತಿಸಿಕೊಂಡವರು.

ಡಿ.ಎಸ್.ಮಲ್ಲಪ್ಪನವರು ತುಮಕೂರು ಜಿಲ್ಲೆ ತಿಪಟೂರಿನ ಪ್ರಬಲ ಲಿಂಗಾಯತ ಸಮುದಾಯಕ್ಕೆ ಸೇರಿದವರು. ಇವರು ವಿದ್ಯಾರ್ಥಿಯಾಗಿದ್ದಾಗಲೇ ಗಾಂಧೀಜಿ ಮತ್ತು ಇತರ ನಾಯಕರ ಪ್ರಭಾವದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ತೊಡಗಿಸಿಕೊಂಡರು.

*Please cite this article as:* ನಾಗರತ್ನಮ್ಮ, ಎಸ್ ಮತ್ತು ನಾರಾಯಣ ಗೌಡ (2026). ತುಮಕೂರು ಜಿಲ್ಲೆಯ ರಾಜಕೀಯ ಪಟು ಡಿ.ಎಸ್.ಮಲ್ಲಪ್ಪ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 66–70

ಡಿ.ಎಸ್.ಮಲ್ಲಪ್ಪನವರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು ಆಗಿದ್ದರು. 1881ರಲ್ಲಿ ದಿವಾನ್ ರಂಗಾಚಾರ್ಲುರವರಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆ ಸ್ಥಾಪನೆಯಾಯಿತು. ಈ ಪ್ರಜಾಪ್ರತಿನಿಧಿ ಸಭೆಯು ಮೈಸೂರು ಸಂಸ್ಥಾನದ ಸಾಮಾಜಿಕ, ರಾಜಕೀಯ ಹೋರಾಟಕ್ಕೆ ಒಂದು ವೇದಿಕೆಯಾಗಿತ್ತು ಎಂದರೂ ತಪ್ಪಾಗಲಾರದು. ಈ ಸಂಸ್ಥೆಗೆ ಪ್ರತಿಷ್ಠಿತ ವ್ಯಕ್ತಿಗಳಾದ ಕೈಗಾರಿಕಾ ಉದ್ಯೋಮಿಗಳು ಭೂಮಾಲೀಕರು, ಶ್ರೀಮಂತ ಬುದ್ದಿಜೀವಿಗಳು ಮಾತ್ರ ಸದಸ್ಯರಾಗುವಂತಹ ಅವಕಾಶವಿತ್ತು. ಈ ನಿಟ್ಟಿನಲ್ಲಿ ಡಿ.ಎಸ್.ಮಲ್ಲಪ್ಪನವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯತ್ವವನ್ನು ಪಡೆದಿದ್ದರು. ಪ್ರಜಾಪ್ರತಿನಿಧಿ ಸಭೆಯು ಅಂದು ಪ್ರಜೆಗಳ ಸಮಸ್ಯೆ ಮತ್ತು ಸವಾಲುಗಳನ್ನು ಪ್ರತಿನಿಧಿಸುವ ಒಂದು ಸಂಸ್ಥೆಯಾಗಿತ್ತು. ಇಲ್ಲಿ ಆಡಳಿತಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳುವ ಅಧಿಕಾರ ಸದಸ್ಯರಿಗಿತ್ತು. ಈ ಸದಾವಕಾಶವನ್ನು ಸಕ್ರಿಯವಾಗಿ ಬಳಸಿಕೊಂಡವರಲ್ಲಿ ಡಿ.ಎಸ್. ಮಲ್ಲಪ್ಪನವರು ಒಬ್ಬರಾಗಿದ್ದರು.

1928ರಲ್ಲಿ ಜೂನ್ ತಿಂಗಳಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ನಡೆಯಿತು. ಈ ಸಂದರ್ಭದಲ್ಲಿ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರಿಸಲು ಮಹಾರಾಜರ ಪ್ರಭುತ್ವ ನಿರಾಕರಿಸಿತು. ಈ ಸಂದರ್ಭದಲ್ಲಿ ಡಿ.ಎಸ್. ಮಲ್ಲಪ್ಪನವರು " ಇದು ಪ್ರಜೆಗಳನ್ನು ಪ್ರತಿನಿಧಿಸುವ ಒಂದು ಸಂಸ್ಥೆ. ಇಲ್ಲಿ ಪ್ರಜೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸುವ ಅವಕಾಶವಿದೆ, ಆಡಳಿತದಿಂದ ಉತ್ತರ ಪಡೆಯುವುದು ಸದಸ್ಯರ ಹಕ್ಕು" ಎಂದು ವಾದಿಸಿದರು. ಆದರೆ ಸರಕಾರ ಇದನ್ನು ಒಪ್ಪಲಿಲ್ಲ ಪರಿಣಾಮವಾಗಿ ಡಿ.ಎಸ್.ಮಲ್ಲಪ್ಪನವರು ಮತ್ತು ಅವರ ಬೆಂಬಲಿಗರೆಲ್ಲರೂ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಿಂದ ಪ್ರಪ್ರಥಮ ಬಾರಿಗೆ ಸಭಾತ್ಯಾಗ ಮಾಡಿದರು.[1] ಈ ಘಟನೆಯನ್ನು ಅವಲೋಕಿಸಿದಾಗ ಡಿ.ಎಸ್.ಮಲ್ಲಪ್ಪನವರು ಒಬ್ಬ ರಾಜಕೀಯ ಮತ್ತು ಪ್ರಜಾಪ್ರತಿನಿಧಿಯಾಗಿ ಅವರಲ್ಲಿದ್ದ ಬದ್ಧತೆ, ಪ್ರಜಾ ಕಲ್ಯಾಣ ಎಷ್ಟು ಎಂಬುದು ನಮಗೆ ಅರಿವಾಗುತ್ತದೆ. ಈ ಸಣ್ಣ ಘಟನೆಯು ಸಂಸ್ಥಾನದ ರಾಜಕೀಯ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಮತ್ತು ಪರಿಣಾಮಕಾರಿಯಾದ ಘಟನೆಯಾಗಿತ್ತು.

**ಪ್ರಜಾಪಕ್ಷದ ನಾಯಕನಾಗಿ ಡಿ.ಎಸ್. ಮಲ್ಲಪ್ಪ**

ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ 1917ರಲ್ಲಿ ಸ್ಥಾಪನೆಯಾದ ಪ್ರಜಾಮಿತ್ರ ಮಂಡಳಿಯು ಮೊದಲ ರಾಜಕೀಯ ಸಂಸ್ಥೆ ಆಗಿತ್ತು. ಈ ಸಂಸ್ಥೆಯು ಕಾಲಕ್ರಮೇಣ ಕೇವಲ ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು. ಸಂಸ್ಥೆಯ ಸದಸ್ಯರಾಗಿ ಡಿ.ಎಸ್. ಮಲ್ಲಪ್ಪನವರು ಸೇವೆ ಸಲ್ಲಿಸಿದರು. ಇದರ ಕಾರ್ಯ ಚಟುವಟಿಕೆಗಳು ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ ಎಂಬ ಕಾರಣದಿಂದ ಡಿ.ಎಸ್.ಮಲ್ಲಪ್ಪ ಮತ್ತು ಇತರರು ಈ ಸಂಸ್ಥೆಯಿಂದ ಹೊರಬಂದು "ಪ್ರಜಾಪಕ್ಷ" ವನ್ನು 1930ರಲ್ಲಿ ಪ್ರಾರಂಭಿಸಿದರು. ಈ ಪ್ರಜಾಪಕ್ಷದ ರಾಜಕೀಯ ಧೋರಣೆಗಳು ಪ್ರಜಾಮಿತ್ರ ಮಂಡಳಿಯ ರಾಜಕೀಯ ಧೋರಣೆಗಳಿಗಿಂತ ಭಿನ್ನವಾಗಿತ್ತು. ಕ್ರಮೇಣವಾಗಿ ಇದರ ಸದಸ್ಯತ್ವ ಹೆಚ್ಚಾಯಿತು ಜನತೆಯ ಪೂರಕ ಭಾವನೆಗಳಿಗೆ ಸ್ಪಂದಿಸ ತೊಡಗಿತು. ಪ್ರಾರಂಭದಲ್ಲಿ ಪ್ರಜಾಪಕ್ಷದ ಕಾರ್ಯಕ್ರಮಗಳು ಮೃದು ಧೋರಣೆಯಿಂದ ಕೂಡಿತ್ತು ಕಾಲಕ್ರಮೇಣ ಇದರ

[1] ಸ್ಮಿತಾ ಬಾವಿಕಟ್ಟೆ, ದಿ ರೋಲ್ ಆಫ್ ಮಿರ್ಜಾ ಇಸ್ಮಾಯಿಲ್ ಇನ್ ಮಾಡ್ರನ್ ಮೈಸೂರು, ಅನ್‌ಪಬ್ಲಿಸಡ್ ಡಸರ್ಗ್ರೇಷನ್, ಮೈಸೂರು ಯೂನಿವರ್ಸಿಟಿ, ಮೈಸೂರು

ಚಟುವಟಿಕೆಗಳು ಸರ್ಕಾರವು ತೀವ್ರತರವಾಗಿ ತರಾಟೆಗೆ ತೆಗೆದುಕೊಳ್ಳುವಷ್ಟರ ಮಟ್ಟಿಗೆ ಇದು ಪ್ರಬಲವಾಯಿತು. ಪ್ರಜಾಪಕ್ಷದ ಮೊದಲ ಅಧಿವೇಶನವು ಸೆಪ್ಟೆಂಬರ್ 1931ರಲ್ಲಿ ಚನ್ನಪಟ್ಟಣದಲ್ಲಿ ನಡೆಯಿತು. ನ್ಯಾಯವಿದಾಯಕ ಸಭೆಯ ಸದಸ್ಯರು, ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ನ ಅಧ್ಯಕ್ಷರು ಆದ ಡಿ.ಎಸ್.ಮಲ್ಲಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷೀಯ ಭಾಷಣದಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕು ಇದಕ್ಕೆ ಎಲ್ಲಾ ಸಂಸ್ಥಾನದ ಪ್ರಜೆಗಳು ಬೆಂಬಲಿಸಬೇಕೆಂದು ಕರೆ ನೀಡಿದರು.[2]

ಪ್ರಜಾಪಕ್ಷದ ಎರಡನೇ ಅಧಿವೇಶನವು ಅಕ್ಟೋಬರ್ 1931 ರಂದು ಮೈಸೂರಿನಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ಹಾಸನ ಜಿಲ್ಲಾ ಬೋರ್ಡ್‌ನ ಅಧ್ಯಕ್ಷರಾದ ಗುಂಡಪ್ಪ ಗೌಡ ವಹಿಸಿದ್ದರು. ಮೂರನೇ ಅಧಿವೇಶನವು ತುಮಕೂರಿನಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ಮೈಸೂರು ಸಂಸ್ಥಾನದ ಖ್ಯಾತ ವಾಣಿಜ್ಯೋದ್ಯಮಿಯಾದ ಪಾಮಡಿ ಸುಬ್ಬರಾಯ ಶೆಟ್ಟಿ ಅಧ್ಯಕ್ಷತೆಯನ್ನು ವಹಿಸಿದ್ದರು. ಡಿ.ಎಸ್. ಮಲ್ಲಪ್ಪನವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಭೆಯನ್ನು ಕುರಿತು "ಈ ಸಂಸ್ಥೆಯು ಪ್ರಾರಂಭವಾಗಿರುವುದು ಸಾಮಾನ್ಯ ಜನರ ಕಲ್ಯಾಣಕ್ಕಾಗಿ ಹಾಗೂ ಮೈಸೂರು ಸಂಸ್ಥಾನದಲ್ಲಿ ಮಹಾರಾಜರ ಕೃಪಾಕಟಾಕ್ಷದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪನೆ ಮಾಡುವ ಮೂಲಕ ಎಲ್ಲಾ ಸಮುದಾಯಗಳಿಗೂ ಸಮಾನವಾದ ಅವಕಾಶಗಳನ್ನು ನೀಡಬೇಕು.[3] ಈ ಪಕ್ಷದ ಧ್ಯೇಯಗಳಲ್ಲಿ ಸಾರ್ವಜನಿಕರ, ನಾಗರಿಕರ ಹಕ್ಕುಗಳನ್ನು ಕಾಪಾಡುವ ಉದ್ದೇಶವನ್ನು ಹೊಂದಿದೆ" ಎಂದು ಮಾತನಾಡಿದರು. "ಈ ಎಲ್ಲಾ ಮೇಲಿನ ಉದ್ದೇಶಗಳನ್ನು ಸಫಲಗೊಳಿಸುವ ಹಾದಿಯಲ್ಲಿ ಪಕ್ಷವು ಶ್ರಮಿಸುತ್ತದೆ" ಎಂದು ಮಾತನಾಡಿದರು.

**ಪ್ರಜಾಪ್ರತಿನಿಧಿ ಸಭೆ**

ಡಿ.ಎಸ್.ಮಲ್ಲಪ್ಪನವರು ಪ್ರಮುಖ ರಾಜಕೀಯ ಧುರೀಣರು (ತಿಪಟೂರಿನ ನಿವಾಸಿಗಳು) ನ್ಯಾಯವಿದಾಯಕ ಸಭೆಯ ಸದಸ್ಯರು, ಪ್ರಜಾಮಿತ್ರ ಮಂಡಳಿ ಮತ್ತು ಪ್ರಜಾಪಕ್ಷದ ಸಂಸ್ಥಾಪಕ ಸಂಘಟನಾಕಾರರು. ಪ್ರಜಾಪಕ್ಷದ ಅಧಿವೇಶನಗಳು ಚನ್ನಪಟ್ಟಣ ಮತ್ತು ತುಮಕೂರಿನಲ್ಲಿ ನಡೆದಾಗ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದು ಅಧಿವೇಶನವನ್ನು ವ್ಯವಸ್ಥಿತವಾಗಿ ಸಂಘಟಿಸಿದರು. ಈ ಅಧಿವೇಶನದಲ್ಲಿ ಜವಾಬ್ದಾರಿ ಸರ್ಕಾರವನ್ನು ಮಹಾರಾಜರು ದಯಪಾಲಿಸಬೇಕೆಂದು ಕೋರಿದರು. ತಿಪಟೂರಿನಲ್ಲಿ ಕಾಂಗ್ರೆಸ್ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸುತ್ತಿದ್ದರು.

1938ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೈಸೂರು ಕಾಂಗ್ರೆಸ್ ಜನ್ಮ ತಾಳಿತು. ಇದರ ಮೊದಲ ಅಧಿವೇಶನವು ಶಿವಪುರದಲ್ಲಿ ನಡೆದಾಗ ತುಮಕೂರು ಜಿಲ್ಲೆಯಿಂದ ಆರ್.ಎಸ್.ಆರಾಧ್ಯ, ತಾಳೆಗೆರೆ ಸುಬ್ರಮಣ್ಯಂ, ಮಾಲಿಮರಿಯಪ್ಪ, ವಿ.ಎಸ್. ವೆಂಕಟೇಶ್ ಗುಪ್ತಾ, ಡಿ.ಎಸ್.ಮಲ್ಲಪ್ಪನವರು ಭಾಗವಹಿಸಿದ್ದರು. ನಂತರ ಡಿ.ಎಸ್.ಮಲ್ಲಪ್ಪನವರು ವಿದುರಾಶ್ವತ್ಥದಲ್ಲಿ ನಡೆದ ಧ್ವಜಾ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಏಪ್ರಿಲ್

---

[2] ವೀರತಪ್ಪ.ಕೆ. History of Modern Mysore 1985 Rhandan Publication, page no- 37–39

[3] ವೀರತಪ್ಪ.ಕೆ., ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, ವಿಜಯ ರವಿ ಪ್ರಕಾಶನ, 1977.

ತಿಂಗಳ 1938ರಲ್ಲಿ ಇಲ್ಲಿ ನಡೆದ ಧ್ವಜಾ ಸತ್ಯಾಗ್ರಹದ ಸಂದರ್ಭದಲ್ಲಿ ಪೋಲೀಸರ ಗುಂಡಿಗೆ ಹಲವು ಜೀವಗಳನ್ನು ಬಲಿ ಕೊಡಲಾಯಿತು. ಇದನ್ನು ಈ ಚರಿತ್ರೆಯಲ್ಲಿ ವಿದುರಾಶ್ವತ್ಥ ದುರಂತ (ದಕ್ಷಿಣ ಭಾರತದ ಜಲಿಯನ್ ವಾಲಾಬಾಗ್) ಎಂದು ಪ್ರಸಿದ್ಧಿಯನ್ನು ಪಡೆದಿದೆ. ಇದೇ ಜಿಲ್ಲೆಯ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರರಾದ ಆರ್.ಸೆ ಆರಾಧ್ಯ ರವರು ಈ ಘಟನೆ ನಡೆದ ವಿದುರಾಶ್ವರ್ತತಕ್ಕೆ ತೆರಳಿ ಅಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಜನವಾಣಿ ಪತ್ರಿಕೆಯಲ್ಲಿ ಒಂದು ಲೇಖನವನ್ನು ಪ್ರಕಟಿಸಿದರು. ಇದರಿಂದಾಗಿ ಜಿಲ್ಲೆಯ ಇತರೆ ಕಾಂಗ್ರೆಸ್ ನಾಯಕರಾದ ತಾಳಗೆರೆ ಸುಬ್ಬರಮಣ್ಯಂ, ಡಿಎಸ್.ಮಲ್ಲಪ್ಪನವರು ಆರಾಧ್ಯರವರನ್ನು ಪ್ರಶಂಸಿಸಿದರು. ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಸರ್ಕಾರ ಕಾಂಗ್ರೆಸ್ ನಾಯಕರನ್ನು ದಸ್ತಗಿರಿ ಮಾಡಿದರು. ಆ ಸಂದರ್ಭದಲ್ಲಿ ಮಲ್ಲಪ್ಪನವರು ಕಾನ್ಫರೆನ್ಸ್‌ಗೆ ರಾಜೀನಾಮೆಯನ್ನು ನೀಡಿ 1938ರಲ್ಲಿ ಮತ್ತೆ ಚುನಾವಣೆಗೆ ನಿಂತು ಜಯಶೀಲರಾದರು. ಜಿಲ್ಲೆಯ ತಿಪಟೂರಿನಲ್ಲಿ ಖಾದಿ ಪ್ರಚಾರ, ಹರಿಜನೋದ್ಧಾರ ಮತ್ತು ಪಾನನಿರೋಧದಂತಹ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದರು. ಇವರ ಪುತ್ರರಾದ ಚಂದ್ರಶೇಖರ್ ಅವರು ಸಹ ಅಂದು ಜಿಲ್ಲೆಯ ವಿದ್ಯಾರ್ಥಿ ಮುಖಂಡರಾಗಿ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು.

**ಪರಾಮರ್ಶನ ಗ್ರಂಥಗಳು**

**ಪ್ರಾಥಮಿಕ ಆಧಾರಗಳು**

- ಕಾಂಗ್ರೇಸ್ ಮೀಟಿಂಗ್ಸ್ ತುಮಕೂರು ಡಿಸ್ಟ್ರಿಕ್ಟ್ 1938–39
- ಶಿವಪುರ ಕಾಂಗ್ರೇಸ್ ಕನ್‌ವೆಂಕ್ಷನ್, 1938
- ಮೈಸೂರು ಕಾಂಗ್ರೇಸ್ ಮೀಟಿಂಗ್ಸ್
- ಪಾರಿ ಸತ್ಯಾಗ್ರಹ ಇನ್ ತುಮಕೂರು ಡಿಸ್ಟ್ರಿಕ್ಟ್, ದಿನಾಂಕ: 29–09–1939

**ಸಂದರ್ಶನ**

- ಹನುಮಂತರಾವ್.ಎಂ.ಎಸ್, ದಿನಾಂಕ: 09–06–2009, ತುಮಕೂರು
- ಕವಿತಾಕೃಷ್ಣ, ದಿನಾಂಕ: 10–06–2009, ಕ್ಯಾತಂದ್ರ, ತುಮಕೂರು
- ನರಸಿಂಹಮೂರ್ತಿ.ಟಿ.ಪಿ, ದಿನಾಂಕ:12–09–2009, ತುಮಕೂರು

**ಅನುಷಂಗಿಕ ಆಧಾರಗಳು**


- ಭಾಸ್ಕರಪ್ಪ ಸಿ.ಎನ್. (1981). *ತುಮಕೂರು ಜಿಲ್ಲಾ ದರ್ಶನ.* ಟೈಮ್ಸ್ ಪಬ್ಲಿಕೇಷನ್,
- ನಾಗರತ್ನಮ್ಮ, ಎಸ್. (2013). *ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು.* ಅನ್ನಪೂರ್ಣ ಪಬ್ಲಿಸಿಂಗ್ ಹೌಸ್.

- ನಾಗರತ್ನಮ್ಮ, ಎಸ್. (2009). *ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ.* ದೇಸಿ ಪುಸ್ತಕ ಪ್ರಕಾಶನ.
- ಸೂರ್ಯನಾಥ ಯು ಕಾಮತ್. *ಸ್ವತಂತ್ರ ಹೋರಾಟದ ಸ್ಮೃತಿಗಳು,* ಗೀತಾ ಬುಕ್ ಹೌಸ್.
- ಸುಶೀಲಾ ಸುಬ್ರಮಣ್ಯಂ (ಸಂ.) (1992). ಕರ್ನಾಟಕ ಸ್ವತಂತ್ರ ಹೋರಟಗಾರರು (ಸ್ಮರಣ ಸಂಚಿಕೆ), ಕರ್ನಾಟಕ ರಾಜ್ಯ ಸ್ವತಂತ್ರ ಹೋರಾಟಗಾರರ ಸಂಘ.
- ವೀರತಪ್ಪ, ಕೆ. (1965). *ರೀಡಿಂಗ್ಸ್ ಇನ್ ಮಾರ್ಡ್ರನ್ ಹಿಸ್ಟರಿ ಇನ್ ಮೈಸೂರು*, ನ್ಯೂಡೆಲ್ಲಿ,